ಸಂಪಾದಕೀಯ

ಎಲ್ಲರೊಳಗೊಂದಾಗು ಮತದಾರ

ಡಿ.ವಿ. ಗುಂಡಪ್ಪನವರು ತಮ್ಮ ಚುಟುಕವೊಂದರ ಕೊನೆಯಲ್ಲಿ 'ಎಲ್ಲರೊಳಗೊಂದಾಗು ಮಂಕುತಿಮ್ಮ' ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಇದನ್ನೇ ಕೊಂಚ ಮಾರ್ಪಡಿಸಿ, 'ಎಲ್ಲರೊಳಗೊಂದಾಗು ಮತದಾರ' ಎಂದು ಕೇಳಿಕೊಳ್ಳಬೇಕಾದ ಕಾಲ ಬಂದಿದೆ. ಕಾರಣ, ಮಿಕ್ಕೆಲ್ಲ ಕೆಲಸಗಳಿಗೆ ನಮ್ಮ ಜನರಿಗೆ ಉಚಿತವಾಗಿ, ಯಥೋಚಿತವಾಗಿ ಸಿಗುವ ಸಮಯವು, ಮತದಾನದಂಥ ನಿರ್ಣಾಯಕ ಹೊಣೆಗಾರಿಕೆಯ ನಿಭಾವಣೆಯ ವೇಳೆ ಅದ್ಯಾಕೋ ದುಬಾರಿಯಾಗಿಬಿಡುತ್ತದೆ! ಇದು ಸಲ್ಲ. ಲೋಕಸಭಾ ಚುನಾವಣೆಗೆ ಸಂಬಂಧಿಸಿ ರಾಜ್ಯದಲ್ಲಿ ನಾಳೆ (ಏ.26) ನಡೆಯಲಿರುವ ಮೊದಲ ಹಂತದ ಮತದಾನದಲ್ಲಿ ಪ್ರತಿಯೊಬ್ಬ ಅರ್ಹ ಮತದಾರನೂ ತನ್ನ ಹಕ್ಕು ಚಲಾಯಿಸುವಂತಾಗಬೇಕು. ಈ ಕರ್ತವ್ಯವನ್ನು ನಿಭಾಯಿಸಿದಾಗ ಮಾತ್ರವೇ, ನಾವು ಚುನಾಯಿಸಿದ ವ್ಯಕ್ತಿ ಮತ್ತು ಗದ್ದುಗೆಯೇರುವ ಸರಕಾರದ ಸಹಭಾಗಿಗಳು ತಪ್ಪುಹೆಜ್ಜೆ ಇಟ್ಟಾಗ ಅವರನ್ನು ಪ್ರಶ್ನಿಸುವ ಅಧಿಕಾರವೂ ನಮಗೆ ಪ್ರಾಪ್ತವಾಗುತ್ತದೆ ಎಂಬುದನ್ನು ಮರೆಯದಿರೋಣ. 'ನಾನೊಬ್ಬ ಮತ ಚಲಾಯಿಸದಿದ್ದರೆ ಆಕಾಶ ಕಳಚಿ ಬೀಳುವುದೇ? ಸಾಮ್ರಾಜ್ಯ ಮುಳುಗಿಹೋಗುವುದೇ?' ಎಂಬ ಉದಾಸೀನದ ಮಾತಿಗಾಗಲೀ, 'ಮತದಾನಕ್ಕೆ ಸಮಯವೇ ಸಿಗಲಿಲ್ಲ' ಎಂಬ ಕುಂಟುನೆಪಕ್ಕಾಗಲೀ ಆಸ್ಪದ ನೀಡದಿರೋಣ. 'ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ' ಎಂಬ ಮಾತಿನಂತೆ, ವಿದ್ಯುನ್ಮಾನ ಮತಯಂತ್ರದಲ್ಲಿ ದಾಖಲಾಗುವ ಒಬ್ಬೊಬ್ಬ ಪ್ರಜ್ಞಾವಂತ ನಾಗರಿಕನ ಮತವೂ ಕೇವಲ ಮತವಾಗಿರುವುದಿಲ್ಲ, ಅದೊಂದು ನಿಜದನಿಯಾಗಿರುತ್ತದೆ. ಇಂಥ ಗಣನೀಯ ದನಿಗಳು ಒಗ್ಗೂಡಿದಾಗಲೇ ಅದು ನಿಜಾರ್ಥದ 'ಜನದನಿ' ಆಗುತ್ತದೆ ಎಂಬುದನ್ನು ಮರೆಯದಿರೋಣ. ಇಷ್ಟೂ ವರ್ಷಗಳವರೆಗಿನ ಲೋಕಸಭಾ ಚುನಾವಣೆಯಲ್ಲಿ ಒಟ್ಟಾರೆ ಮತದಾನದ ಪ್ರಮಾಣವು ಶೇ.70ರ ಮಟ್ಟವನ್ನು ಮೀರಿಲ್ಲ ಎಂಬುದು ನಿಜಕ್ಕೂ ತಲೆತಗ್ಗಿಸುವ ಸಂಗತಿ. ಇಂಥ ನಡೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೂ ಶೋಭೆ ತರುವುದಿಲ್ಲ. ದೇಶದ ಆಳುಗ ವ್ಯವಸ್ಥೆಯ ಕಟ್ಟೋಣದಲ್ಲಿ ಶೇ.30ರಷ್ಟು ಮಂದಿ ಸಹಭಾಗಿಗಳಾಗಿಲ್ಲ ಎಂದರೆ, ಅದು ಹೊಣೆಗಾರಿಕೆಯಿಂದ ವಿಮುಖರಾಗಿರುವುದರ ದ್ಯೋತಕವೇ ಅಲ್ಲವೇ? ಹೀಗಾಗಿ, ಎಲ್ಲರಂತೆ, ಎಲ್ಲರೊಳಗೊಂದಾಗಿ ಮತದಾನ ಮಾಡುವ ಪ್ರಜ್ಞೆ ಎಲ್ಲರಲ್ಲೂ ಗಟ್ಟಿಗೊಳ್ಳಲಿ.

ಸೊಂಪಾದಕೀಯ

ಮಗನಂತೆ ಅಪ್ಪ

ಇತ್ತೀಚಿನ ದಿನಗಳಲ್ಲಿ ದೇಶದ ಹಿರಿಯ ರಾಜಕೀಯ ನಾಯಕ ದೇವೇಗೌಡರ ಜೆಡಿಎಸ್ ಪಕ್ಷ ಎತ್ತ ಸಾಗುತ್ತಿದೆ ಅನ್ನೋದೇ ಯಾರಿಗೂ ಗೊತ್ತಾಗುತ್ತಿಲ್ಲ. ಆದರೆ ದೇವೇಗೌಡ ಆ್ಯಂಡ್ ಸನ್ಸ್ ಮಾತ್ರ, ಸದ್ಯ ನಿಂತ ನೀರಾಗದೆ ಎತ್ತಲೋ ಸಾಗುತ್ತಿದೆಯಲ್ಲಾ ಅದೇ ಸಮಾಧಾನ ಎಂದು ಸುಮ್ಮನಿರಬಹುದು. ಆದರೆ ರಾಜ್ಯ ರಾಜಕಾರಣದಲ್ಲಿ ಜೆಡಿಎಸ್‌ನಲ್ಲಿ ಆಗುತ್ತಿರೋ ಬದಲಾವಣೆಗಳು ಆಶ್ಚರ್ಯ ತರಿಸುತ್ತಿವೆ. ಯಾಕಂದ್ರೆ ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆ ಮಾಡುವಷ್ಟು ದೊಡ್ಡ ಪಕ್ಷವಾಗಿ ಜೆಡಿಎಸ್ ಉಳಿದಿಲ್ಲ ಅನ್ನೋದು ಬಹುತೇಕರ ಅನಿಸಿಕೆ. ಅದು ತಕ್ಕ ಮಟ್ಟಿಗೆ ನಿಜ ಕೂಡಾ. ಇಷ್ಟು ದಿನ ಕುಮಾರಸ್ವಾಮಿ ಅವರು ಮಾತ್ರ ಬಿಜೆಪಿಯ ಪರವಾಗಿ ಮಾತನಾಡುತ್ತಿದ್ದರು. ಆದರೆ ಈಗ ಆಗ್ತಾ ಇರೋ ಪ್ರಮುಖ ಬದಲಾವಣೆ ಅಂದ್ರೆ ದೇವೇಗೌಡರ ವರ್ತನೆಯಲ್ಲಿ ಕಾಣುತ್ತಿರೋ ಹೊಸ ಬಣ್ಣಗಳು. ಕುಮಾರಸ್ವಾಮಿ ಅವರೇನೋ, ಜಾತ್ಯತೀತ ಜನತಾದಳವನ್ನು ಮರೆತು, ಕೋಮುವಾದಿ ಎಂದೇ ಕುಖ್ಯಾತಿ ಪಡೆದಿರೋ ಬಿಜೆಪಿ ಜತೆ ಕೈ ಜೋಡಿಸಿ ಹೊಂದಾಣಿಕೆ ಮಾಡಿಕೊಂಡುಬಿಟ್ಟರು. ಹಿಂದೆಲ್ಲಾ ಇದೇ ಬಿಜೆಪಿಯವರನ್ನು ಬಾಯಿಗೆ ಬಂದಂತೆ ಆಡಿಕೊಳ್ಳುತ್ತಿದ್ದ ಕುಮಾರಣ್ಣ ಈಗ ಬಿಜೆಪಿ-ಜೆಡಿಎಸ್ 'ಭಾಯಿ-ಭಾಯಿ' ಎನ್ನುತ್ತಿದ್ದಾರೆ. ಈ ಮುನ್ನ ಕುಮಾರಸ್ವಾಮಿ ಅವರನ್ನು ಕೆಟ್ಟ ಪದಗಳಲ್ಲಿ ನಿಂದಿಸಿ, ಅವರ ಕಾಲಿಗೆ ಕೊಕ್ಕೆ ಹಾಕುತ್ತಿದ್ದ ಬಿಜೆಪಿ ನಾಯಕರೆಲ್ಲಾ ಕುಮಾರಸ್ವಾಮಿ ಮನೆಗೆ ಭೇಟಿ ನೀಡಿ ಬೊಕೆ ಕೊಟ್ಟು ಬರುತ್ತಿದ್ದಾರೆ. ಇಷ್ಟು ದಿನ 'ಭಾಯಿ-ಭಾಯಿ' ಅಂತಿದ್ದ ಮುಸ್ಲಿಂ ಸಮುದಾಯವನ್ನೂ ಕಡೆಗಣಿಸಿದ್ದಾರೆ ಎಚ್ಡಿಕೆ. ಜಮೀರ್ ಅವರ ನಂತರ ಈಗ ಇಬ್ರಾಹಿಂ ಕೂಡಾ ಅವರಿಗೆ ಬೇಡವಾಗಿದ್ದಾರೆ. ಕುಮಾರಣ್ಣ ಅವರು ಕಾಲಕ್ಕೆ ತಕ್ಕಂತೆ ಬದಲಾಗೋದು ಗೊತ್ತಿದ್ದವರಿಗೆ ಇದರಲ್ಲಿ ಆಶ್ಚರ್ಯ ಏನೂ ಕಾಣಲಿಲ್ಲ. ಆದರೆ ಅಚ್ಚರಿ ಅಂತ ಎಲ್ಲರಿಗೂ ಅನ್ನಿಸ್ತಾ ಇರೋದು ದೇವೇಗೌಡರ ಇತ್ತೀಚಿನ ಮಾತುಗಳನ್ನು ಕೇಳಿ. ಇಷ್ಟು ದಿನ ಬಿಜೆಪಿ ಪರವಾಗಿ ಮಾತಾಡದ ದೊಡ್ಡ ಗೌಡರಿಗೆ ಈಗ ಬಿಜೆಪಿ ಮತ್ತು ಮೋದಿ ಬಗ್ಗೆ ಅಪಾರ ಪ್ರೀತಿ ಬಂದುಬಿಟ್ಟಿದೆ. ದಿನ ಬೆಳಗಾದರೆ ಅವರು ಬಿಜೆಪಿ ಮತ್ತು ಮೋದಿ ಗುಣಗಾನದಲ್ಲಿ ತಮ್ಮ ವೃದ್ಧಾಪ್ಯ ಕಳೆಯುತ್ತಿದ್ದಾರೆ. ಇದನ್ನೆಲ್ಲಾ ನೋಡಿದವರು ಮಾತ್ರ, 'ಅಪ್ಪನಂತೆ ಮಗ ಅನ್ನೋ ಮಾತು ಕೇಳಿದ್ದೆವು, ಆದರೆ ಇಲ್ಲಿ ನೋಡಿದ್ರೆ ಮಗನಂತೆ ಅಪ್ಪ, ಏನಪ್ಪಾ ಇದು?!' ಅಂತ ತಲೆ ಕೆರೆದುಕೊಳ್ಳುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ರಾಜೀವ್-ವಿ.ಪಿ.ಸಿಂಗ್ ಮಾತುಕತೆ

1987ರ ಜೂನ್. ಪ್ರಧಾನಿ ರಾಜೀವ್ ಗಾಂಧಿ ಮತ್ತು ಅವರ ಸಂಪುಟ ಸಹೋದ್ಯೋಗಿ ವಿ.ಪಿ.ಸಿಂಗ್ ಸಂಬಂಧ ಹಳಸಿತ್ತು. ರಾಜೀವ್ ಸಂಪುಟದಿಂದ ಹೊರಬಿದ್ದ ಆರಿಫ್ ಮಹಮ್ಮದ್ ಖಾನ್, ಅರುಣ್ ನೆಹರು, ವಿ.ಸಿ.ಶುಕ್ಲ ಮುಂತಾದವರು ವಿ.ಪಿ.ಸಿಂಗ್ ಬಣ ಸೇರಿದ್ದರು. ಅಂದಿನ ರಾಷ್ಟ್ರಪತಿ ಜೈಲ್‌ಸಿಂಗ್ ರಾಜೀವ್ ವಿರೋಧಿ ಬಣದವರೊಂದಿಗೆ ಸತತ ಸಂಪರ್ಕದಲ್ಲಿದ್ದರು. ಜೈಲ್‌ಸಿಂಗ್ ರಾಜೀವ್ ಸಂಪುಟವನ್ನು ಕಿತ್ತೆಸೆಯುವ ಸಾಧ್ಯತೆ ಇದೆ ಎಂಬ ಗುಲ್ಲು ಹಬ್ಬಿತ್ತು. ರಾಜೇಶ್ ಪೈಲಟ್ ಅವರು ರಾಜೀವರ ಪರವಾಗಿ ವಿ.ಪಿ.ಸಿಂಗ್ ಅವರನ್ನು ಭೇಟಿ ಮಾಡಿ ಇಬ್ಬರ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಪ್ರಯತ್ನಿಸಿದ್ದರು. ಈ ಮಧ್ಯೆ ರಾಜೀವ್ ಮತ್ತು ಸಿಂಗ್ ಎರಡು ಬಾರಿ ಖುದ್ದಾಗಿ ಭೇಟಿ ಮಾಡಿದ್ದರು. ಆದರೆ ಉನ್ನತ ನಾಯಕರ ಮನಸ್ಸಿನಲ್ಲಿ ಹಳೆಯ ಘಟನೆಗಳೇ ಆಗಾಗ ಮೆಲುಕು ಹಾಕುತ್ತಿದ್ದರೆ, ಸಂಬಂಧ ಸುಧಾರಿಸುವ ಬದಲು ಹಾಳಾಗುತ್ತದೆ ಎಂಬುದಕ್ಕೆ ಅವರಿಬ್ಬರ ಭೇಟಿಯೇ ನಿದರ್ಶನ. ಮೊದಲ ಸಲ ಭೇಟಿಯಾದಾಗ ಸಿಂಗ್, 'ನಾವಿಬ್ಬರು ನಮ್ಮ ನಮ್ಮ ಹುದ್ದೆಯನ್ನು ಮರೆತು, ನಾನು ವಿಶ್ವನಾಥ ಆಗಿ, ನೀವು ರಾಜೀವ್ ಆಗಿ ಮಾತಾಡೋಣ. ನಾನು ಸಿಐಎ ಏಜೆಂಟ್ ಎಂದು ಪ್ರತಿದಿನ ಕಲ್ಪನಾಥ ರೈ ಮತ್ತು ಕೆ.ಕೆ.ತಿವಾರಿ ಹೇಳಿಕೆ ನೀಡುತ್ತಿದ್ದಾರೆ, ಏನಿದು ಅಸಹ್ಯ?' ಎಂದು ಖಾರವಾಗಿಯೇ ಕೇಳಿದರು. ಅದಕ್ಕೆ ರಾಜೀವ್, 'ಪಕ್ಷದಲ್ಲಿ ವಿಪರೀತವಾದ ಆಕ್ರೋಶವಿದೆ. ಅದು ಆ ಆಕ್ರೋಶದ ಅಭಿವ್ಯಕ್ತಿಯಷ್ಟೇ' ಎಂದರು. ಇದರಿಂದ ಕ್ರುದ್ಧರಾದ ವಿ.ಪಿ. ಸಿಂಗ್, 'ನಾನು ಇದನ್ನೆಲ್ಲ ನಿಮ್ಮ ತಾಯಿಯ ಕಾಲದಿಂದ ನೋಡುತ್ತಾ ಬಂದಿದ್ದೇನೆ. ಯಾವ ನಟ್ ಮತ್ತು ಬೋಲ್ಟ್ ಯಾವ ತಂತಿಗೆ ಜಾಯಿನ್ ಆಗಿದೆ ಎಂಬುದು ನನಗೆ ಗೊತ್ತು. ತಿವಾರಿ ಮತ್ತು ರೈ ಲೌಡ್ ಸ್ಪೀಕರುಗಳು. ಈ ರೂಮಿನಲ್ಲಿ ಮೈಕ್ರೋ ಫೋನ್‌ಗಳನ್ನು ಅಳವಡಿಸಲಾಗಿದೆ ಎಂಬುದು ಗೊತ್ತು' ಎಂದು ಖಡಾಖಡಿ ನುಡಿದರು. ಸಿಂಗ್ ಅವರಿಂದ ಅಂಥ ತೀಕ್ಷ್ಣ ಪ್ರತಿಕ್ರಿಯೆಯನ್ನು ನಿರೀಕ್ಷಿಸದ ರಾಜೀವ್, 'ಅವರಿಬ್ಬರಿಗೆ ವಾಲ್ಯೂಮ್ ಕಡಿಮೆ ಮಾಡಿ ಎಂದು ಹೇಳುತ್ತೇನೆ' ಎಂದರು. 'ವಾಲ್ಯೂಮ್ ಕಡಿಮೆ ಮಾಡಿ ಅಂದ್ರೆ ಏನರ್ಥ? ರಾಜೀವ್, ನೀವು ನನ್ನ ಜತೆಗೆ ಆಟವಾಡಲು ಬಯಸಿದರೆ, ನಮ್ಮಿಬ್ಬರ ಮಧ್ಯೆ ಫಲಪ್ರದ ಮಾತುಕತೆ ಸಾಧ್ಯವಿಲ್ಲ. ನೀವು ನನ್ನನ್ನು ನಿಷ್ಪ್ರಯೋಜಕ ಮಂತ್ರಿ ಅಥವಾ ಪ್ರಯೋಜನಕ್ಕಿಲ್ಲದ ನಾಯಕ ಎಂದು ಕರೆಯಿರಿ, ತಕರಾರಿಲ್ಲ. ಆದರೆ ನೀವು ನನ್ನ ರಾಷ್ಟ್ರಪ್ರೇಮವನ್ನು ಪ್ರಶ್ನಿಸಿದರೆ ನಾನು ಸುಮ್ಮನಿರುವುದಿಲ್ಲ, ಮುಂದೇನಾಗುತ್ತದೋ ಆಗಲಿ. ನಾನು ಅವುಗಳಿಗೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದರು. ಮರುದಿನದ ಪತ್ರಿಕೆಗಳಲ್ಲಿ ಸಿಂಗ್ ಅವರೇ ದುಂಬಾಲು ಬಿದ್ದು ರಾಜೀವ್‌ರನ್ನು ಭೇಟಿಯಾದರು ಎಂದು ಬರೆಯಿಸಲಾಯಿತು. ಈ ವಿಷಯದಲ್ಲಿ ಪ್ರಧಾನಿ ಕಾರ್ಯಾಲಯದಲ್ಲಿನ ವ್ಯಕ್ತಿಗಳು ಸುಳ್ಳುಸುದ್ದಿ ಹಬ್ಬಿಸಿದರು. ಕೆಲ ದಿನಗಳ ಬಳಿಕ ಖುದ್ದು ರಾಜೀವರೇ ತಮ್ಮ ನಿವಾಸಕ್ಕೆ ಆಗಮಿಸುವಂತೆ ಸಿಂಗ್‌ರನ್ನು ಕರೆದರು. ಆಗ ರಾತ್ರಿ 11 ಗಂಟೆ. ಆ ವೇಳೆ ರಾಜೀವ್ ಹಳೆ ಘಟನೆಯನ್ನೇ ಮುಖ್ಯವಾಗಿ ಪ್ರಸ್ತಾಪಿಸಿದರು. '1977ರಲ್ಲಿ ಇಂದಿರಾ ಗಾಂಧಿಯವರು ಸೋತಾಗ, ನೀವು ಅವರನ್ನು ತೊರೆದಿರಿ' ಎಂದು ರಾಜೀವ್ ಹೇಳಿದ್ದಕ್ಕೆ ಸಿಂಗ್, 'ನೀವು ಹೇಳುವ ಸುಳ್ಳುಗಳನ್ನು ಕೇಳಿದರೆ, ಭೂಮಿ ಬಾಯಿ ತೆರೆಯಬಹುದು' ಎಂದರು ವ್ಯಂಗ್ಯವಾಗಿ. ಜತೆಗೆ 'ನಾವು ನಿತ್ಯವೂ ಅವರ ವಿಲ್ಲಿಂಗ್ಡನ್ ಕ್ರೆಸೆಂಟ್ ನಿವಾಸಕ್ಕೆ ಹೋಗುತ್ತಿದ್ದೆವು. ಆಗ ಸಂಜಯ್ ಇರುತ್ತಿದ್ದರು. ಆದರೆ ನಿಮ್ಮನ್ನು ನಾನು ಅಲ್ಲಿ ಎಂದೂ ನೋಡಿಲ್ಲ, ನಾನು ಅವರ ಜತೆಯಲ್ಲಿ ಇರಲಿಲ್ಲ ಎಂದು ಈಗ ಹೇಳುತ್ತಿದ್ದೀರಿ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಆಗ ರಾಜೀವ್ ನಿರುತ್ತರರಾದರು. 'ನೀವು ನನ್ನ ಬಗ್ಗೆ ಹೀಗೆ ಯೋಚಿಸುತ್ತೀರಿ ಎಂದಾದರೆ, ನಿಮ್ಮ ಪಾಲಿಗೆ ವಿಶ್ವನಾಥ ಸತ್ತುಹೋಗಿದ್ದಾನೆ ಎಂದೇ ತಿಳಿಯಿರಿ' ಎಂದ ಸಿಂಗ್ ಹೊರಡಲು ಎದ್ದು ನಿಂತರು. 'ನೋ..ನೋ.. ವಿಶ್ವನಾಥ... ಕುಳಿತುಕೊಳ್ಳಿ' ಎಂದ ರಾಜೀವ್, 'ಕಾಂಗ್ರೆಸ್ ಇಲ್ಲದೇ 3 ತಿಂಗಳು ಸಹ ನಿಮಗೆ ಕಳೆಯುವುದು ಕಷ್ಟ' ಎಂದು ಹೇಳಿದರು. ಸಿಂಗ್ 'ರಾಜೀವ್ ಜೀ, ಕಾಂಗ್ರೆಸ್ ಸಹಾಯವಿಲ್ಲದೇ 3 ತಿಂಗಳು ಕಳೆದರೆ ಜೀವನವಿಡೀ ನನಗೆ ಅದರ ಅಗತ್ಯವಿಲ್ಲ' ಎಂದು ಹೇಳಿದವರೇ ಅಲ್ಲಿಂದ ಎದ್ದು ಬಂದರು. ಸಿಂಗ್ ನುಡಿದಂತೆ ಆಯಿತು. ಈ ವಿಷಯವನ್ನು ಪತ್ರಕರ್ತೆ ನೀರ್ಜಾ ಚೌಧುರಿ ತಮ್ಮ ಪುಸ್ತಕ (How Prime Ministers Decide) ದಲ್ಲಿ ಬರೆದಿದ್ದಾರೆ.

ಸಂದೇಶಖಾಲಿ ಇಡೀ ಜಗತ್ತಿಗೆ ಕಳಿಸಿದ ಸಂದೇಶ ಮಾತ್ರ ಖಾಲಿಖಾಲಿ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vveditoped@gmail.com

ಪಶ್ಚಿಮ ಬಂಗಾಳದ ಉತ್ತರ ಚೌಬೀಸ್ (24) ಪರಗಣ ಜಿಲ್ಲೆಯ ಸುಂದರಬನ ಪ್ರಾಂತ್ಯದಲ್ಲಿರುವ ಸಂದೇಶಖಾಲಿ ಎಂಬ ಊರನ್ನು ತಲುಪಿದಾಗ ಸೂರ್ಯ ನೆತ್ತಿಯ ಮೇಲೆ ನಿಂತಿದ್ದ. ಆ ರಣರಣ ಬಿಸಿಲಿನಲ್ಲೂ ಗಿಜಿಗಿಜಿ ಜನ. ಈದ್ ಹಿಂದಿನ ದಿನವಾಗಿದ್ದರಿಂದ ಅಲ್ಲಿನ ಮಾರುಕಟ್ಟೆಯಲ್ಲಿ ಕಾಲಿಡಲು ಸಾಧ್ಯವಾಗುತ್ತಿರಲಿಲ್ಲ. ರಸ್ತೆಯ ಇಕ್ಕೆಲಗಳಲ್ಲಿ ಹಾಸಿಕೊಂಡಿದ್ದ ಬೀದಿಬದಿ ಅಂಗಡಿಗಳಲ್ಲಿ ವ್ಯಾಪಾರ ಜೋರಾಗಿ ನಡೆದಿತ್ತು. ಎರಡು ದಿನಗಳ ಹಿಂದೆ, ಆ ಊರಿಗೆ ಹೊರಟ ಪೊಲೀಸರನ್ನು ಅಲ್ಲಿನ ಗೂಂಡಾಗಳು ಹಿಗ್ಗಾಮುಗ್ಗಾ ಥಳಿಸಿದ್ದರು. ಹೀಗಾಗಿ ನಮ್ಮ ಕಾರಿನ ಡ್ರೈವರ್ ಅಲಿ, 'ಸರ್, ಇದಕ್ಕಿಂತ ಮುಂದೆ ಹೋಗುವುದು ಅಪಾಯಕಾರಿ. ನೀವು ಹೇಳಿದರೆ ಇಲ್ಲ ಅನ್ನೋಲ್ಲ. ಆದರೆ ಅಲ್ಲಿಗೆ ಹೋಗುವುದು ಸುರಕ್ಷಿತವಲ್ಲ ಎಂದು ಅನಿಸುತ್ತಿದೆ' ಎಂದ. ನಾವು ಸಂದೇಶಖಾಲಿಯಿಂದ ಎಂಟು ಕಿ.ಮೀ. ಹಿಂದೆ ಸರ್ಬೇರಿಯ ಎಂಬ ಊರಿನಲ್ಲಿ ನಿಂತು ಏನು ಮಾಡುವುದು ಎಂದು ಯೋಚಿಸುತ್ತಿದ್ದೆವು. ಸರ್ಬೇರಿಯದಲ್ಲಿಯೇ ಸಂದೇಶಖಾಲಿಗೆ ಹೋಗದಂತೆ ಬ್ಯಾರಿಕೇಡ್ ಹಾಕಿದ್ದರು. ಮುಂದಿನ ದಾರಿ ನಿರ್ಜನವಾಗಿತ್ತು. ಅಷ್ಟು ಹತ್ತಿರ ಹೋಗಿ ಸಂದೇಶಖಾಲಿಗೆ ಹೋಗದಿದ್ದರೆ ಹೇಗೆ ಎಂಬ ಭಾವನೆ ನನ್ನನ್ನು ಬಲವಾಗಿ ಕಾಡುತ್ತಿತ್ತು. ಆದರೆ ಅಲ್ಲಿಗೆ ಹೋಗುವುದು ಸುರಕ್ಷಿತವಲ್ಲ ಎಂಬುದೂ ಮನವರಿಕೆಯಾಗಿತ್ತು.

ನಾಲ್ಕು ತಿಂಗಳ ಹಿಂದೆ ಸಂದೇಶಖಾಲಿ ಎಂಬ ಊರಿನ ಹೆಸರನ್ನು ಆ ಜಿಲ್ಲೆಯವರ ಹೊರತಾಗಿ ಬೇರೆ ಯಾರೂ ಕೇಳಿರಲಿಲ್ಲ. ಪಶ್ಚಿಮ ಬಂಗಾಳದ ರಾಜಧಾನಿಯಿಂದ 74 ಕಿ.ಮೀ. ದೂರದಲ್ಲಿರುವ ಸಂದೇಶಖಾಲಿ ಹೆಸರನ್ನು ಕೋಲ್ಕೊತಾ ವಾಸಿಗಳು ಸಹ ಕೇಳಿರುವ ಸಾಧ್ಯತೆ ಇರಲಿಲ್ಲ. ಆದರೆ ಈ ವರ್ಷದ ಜನವರಿ 5ರ ನಂತರ ಆ ಊರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡುತ್ತಿದೆ. ಅಲ್ಲಿಂದ ಇಂದಿನವರೆಗೆ ಅದು ನಿತ್ಯ ಸುದ್ದಿಯಲ್ಲಿದೆ. ಆ ಊರಿಗೆ ದೇಶ-ವಿದೇಶಗಳ ಮಾಧ್ಯಮ ಪ್ರತಿನಿಧಿಗಳು ಭೇಟಿ ನೀಡಿ ಅಲ್ಲಿಂದ ವರದಿ ಮಾಡಿದ್ದಾರೆ. ಕನ್ನಡ ಪತ್ರಿಕೆಗಳ ಮುಖಪುಟದಲ್ಲೂ ಸಂದೇಶಖಾಲಿ ಹತ್ತಾರು ಸಲ ಕಂಗೊಳಿಸಿದೆ. ಸಂಸತ್ತಿನಲ್ಲಿ ಈ ವಿಷಯವಾಗಿ ಕೋಲಾಹಲವೇ ನಡೆದಿದೆ. ಪ್ರಧಾನಿ, ಗೃಹಮಂತ್ರಿಗಳ ಭಾಷಣಗಳಲ್ಲೂ ಸಂದೇಶಖಾಲಿ ಪ್ರಸ್ತಾಪವಾಗಿದೆ. ಲಂಡನ್‌ನ ಬಿಬಿಸಿ ಸಂದೇಶಖಾಲಿ ಬಗ್ಗೆ ವಾರಗಟ್ಟಲೆ ಸತತ ವರದಿ ಮಾಡಿತು. ತನ್ನ ಪಾಡಿಗೆ ತಾನಿದ್ದ ಸುಮಾರು ಒಂದೂವರೆ ಲಕ್ಷದಷ್ಟು ಜನಸಂಖ್ಯೆಯಿರುವ ಒಂದು ಸಾಮಾನ್ಯ ಹಳ್ಳಿ ಏಕಾಏಕಿ ಎಲ್ಲರ ಬಾಯಲ್ಲಿ ನುಲಿಯುವಂತಾಗಿದ್ದು ಒಂದು ಕೆಟ್ಟ ಕಾರಣಕ್ಕಾಗಿ. ಹೀಗಾಗಿ ಅಷ್ಟು ಹತ್ತಿರ ಹೋಗಿ ಸಂದೇಶಖಾಲಿಗೆ ಹೋಗದಿದ್ದರೆ ಹೇಗೆ? ಇಲ್ಲದಿದ್ದರೆ ಆ ಊರಿಗೆ ಹೋಗಲು ಯಾವ ಕಾರಣವಿದೆ?

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಮಾಜಿ ಸಚಿವ ಜ್ಯೋತಿಪ್ರಿಯ ಮಲ್ಲಿಕ್, ಪಡಿತರ ದವಸ-ಧಾನ್ಯಗಳನ್ನು ಸಾರ್ವಜನಿಕರಿಗೆ ನೀಡದೇ, ಅದನ್ನು ನೇರವಾಗಿ ಖಾಸಗಿಯವರಿಗೆ ಮಾರಾಟ ಮಾಡಿ ನೂರಾರು ಕೋಟಿ ರುಪಾಯಿ ಅಕ್ರಮವಾಗಿ ಲಪಟಾಯಿಸಿದ್ದ. ಈ ಸಂಬಂಧವಾಗಿ ತನಿಖೆ ನಡೆಸಿದ ಜಾರಿ ನಿರ್ದೇಶನಾಲಯ(ಇ.ಡಿ.)ದ ಅಧಿಕಾರಿಗಳು ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಮಲ್ಲಿಕ್‌ನನ್ನು ಬಂಧಿಸಿದ್ದರು. ಮಲ್ಲಿಕ್‌ನ ಆಪ್ತರಲ್ಲಿ ಒಬ್ಬನಾದ ಸಂದೇಶಖಾಲಿಯ ಶಹಜಾನ್ ಶೇಕ್ ಎಂಬ ಸ್ಥಳೀಯ ನಾಯಕ ಕೂಡ ಈ ಹಗರಣದಲ್ಲಿ ಭಾಗಿಯಾಗಿದ್ದುದು ತನಿಖೆಯಿಂದ ಸಾಬೀತಾಗಿತ್ತು. ಈ ಹಗರಣದಲ್ಲಿ ಶೇಕ್ ಪಾತ್ರವಿರುವುದನ್ನು ಮಲ್ಲಿಕ್ ವಿಚಾರಣೆ ವೇಳೆ ಬಾಯಿಬಿಟ್ಟಿದ್ದ.

ಹೀಗಾಗಿ ಅವನನ್ನು ಖೆಡ್ಡಾಕ್ಕೆ ಕೆಡವಿ ಬಂಧಿಸಲು ಇ.ಡಿ. ಅಧಿಕಾರಿಗಳು ಹೊಂಚು ಹಾಕಿದ್ದರು. ಆ ಪ್ರಕಾರ ಈ ವರ್ಷದ ಜನವರಿ ಐದರಂದು ಇ.ಡಿ. ಅಧಿಕಾರಿಗಳು ಶೇಕ್‌ನನ್ನು ಬಂಧಿಸಲು ಸಂದೇಶಖಾಲಿಗೆ ಸಾಕಷ್ಟು ಪೊಲೀಸ್ ಮತ್ತು ಅರೆಸೇನಾ ಬಲದೊಂದಿಗೆ ಹೋದರು. ತನ್ನನ್ನು ಬಂಧಿಸಲು ಇ.ಡಿ. ಅಧಿಕಾರಿಗಳು ಬರುವ ಸುಳಿವನ್ನು ಮೊದಲೇ ಪಡೆದಿದ್ದ ಶಹಜಾನ್ ಶೇಕ್, ಅವರು ಬರುತ್ತಿದ್ದಂತೆ ತನ್ನ ಬೆಂಬಲಿಗರೊಂದಿಗೆ ಮಾರಣಾಂತಿಕ ಹಲ್ಲೆ ನಡೆಸಿದ. ಬದುಕಿದೆಯಾ ಬಡಜೀವವೇ ಎಂದು ಅಧಿಕಾರಿಗಳು ಎದ್ನೋಬಿದ್ನೋ ಎಂದು ಓಡೋಡಿ ಜೀವ ಉಳಿಸಿಕೊಂಡರು. ಶೇಕ್‌ನ ಸಹಚರರು ಕಿಲೋಮೀಟರ್‌ಗಟ್ಟಲೆ ಅವರನ್ನು ಬೆನ್ನಟ್ಟಿ ಥಳಿಸಿದರು. ಶೇಕ್ ದಾಳಿಗೆ ಪೊಲೀಸರು ಸಹ ದಂಗಾಗಿಹೋದರು. ಆ ದಿನ ಅವರೆಲ್ಲ ಪವಾಡಸದೃಶ ರೀತಿಯಲ್ಲಿ ಜೀವ ಬಚಾವ್ ಮಾಡಿಕೊಂಡು ಬಂದರು. ಮೂವರು ಅಧಿಕಾರಿಗಳು ಗಂಭೀರವಾಗಿ ಗಾಯಗೊಂಡರು.

ಈ ಗಲಾಟೆ ಮಧ್ಯೆ ಶಹಜಾನ್ ಶೇಕ್ ಎಲ್ಲರ ಕಣ್ತಪ್ಪಿಸಿ ಪರಾರಿಯಾಗಿಬಿಟ್ಟ!

ಇಷ್ಟೇ ಆಗಿದ್ದರೆ ಅದು ಅಷ್ಟು ದೊಡ್ಡ ಸುದ್ದಿ ಆಗುತ್ತಿರಲಿಲ್ಲ. ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಈ ಘಟನೆ ಸಿಂಗಲ್ ಕಾಲಂ ಸುದ್ದಿಯಾಗಿ ಮರುದಿನ ಪ್ರಕಟವಾಯಿತು. ಇದಾಗಿ ಒಂದು

ತಿಂಗಳ ನಂತರ, ಸಂದೇಶಖಾಲಿಯ ಸುಮಾರು ಇನ್ನೂರು ಹೆಂಗಸರು ಕೈಯಲ್ಲಿ ಪೊರಕೆ ಮತ್ತು ಬಡಿಗೆ ಹಿಡಿದುಕೊಂಡು ಶಹಜಾನ್ ಶೇಕ್‌ನನ್ನು ಬಂಧಿಸಬೇಕು ಎಂಬ ಆಗ್ರಹದಿಂದ ಬೀದಿಗಿಳಿದರು. ಶೇಕ್‌ನ ಎಲ್ಲ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆತನ ಇಬ್ಬರು ಬಲಗೈ ಬಂಟರಾದ ಶಿವಪ್ರಸಾದ ಹಜ್ರಾ ಮತ್ತು ಉತ್ತಮ್ ಸರ್ದಾರ್‌ನನ್ನೂ ಬಂಧಿಸಬೇಕು ಎಂಬುದು ಅವರ ಆಗ್ರಹವಾಗಿತ್ತು. ಈ ಘಟನೆ ನಡೆದು ಒಂದು ತಿಂಗಳಾದರೂ ಶೇಕ್ ಮತ್ತು ಆತನ ಇಬ್ಬರು ಸಹಚರರನ್ನು ಬಂಧಿಸಲು ಸರಕಾರ ಮೀನಾಮೇಷ ಎಣಿಸುತ್ತಿತ್ತು. ಕಾರಣ ಶೇಕ್ ಸಂದೇಶಖಾಲಿಯ ಸ್ಥಳೀಯ ಟಿಎಂಸಿ ನಾಯಕನಾಗಿದ್ದ. ಆತನನ್ನು ಬಂಧಿಸಕೂಡದೆಂದು ಜ್ಯೋತಿಪ್ರಿಯ ಮಲ್ಲಿಕ್, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮೇಲೆ ಒತ್ತಡ ಹೇರಿದ್ದ. ಪರಿಣಾಮ, ಪೊಲೀಸರು ಯಾವ ಕ್ರಮಕ್ಕೂ ಮುಂದಾಗದೇ ಸುಮ್ಮನಿದ್ದರು.

ಅಷ್ಟಕ್ಕೂ ಶಹಜಾನ್ ಶೇಕ್ ಸಂದೇಶಖಾಲಿಯ ಒಬ್ಬ ಪುಡಿ ರೌಡಿ. ಆತ ಸ್ಥಳೀಯ ಫಿಶರಿಯಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದ. ಬಿಡುವಿನ ವೇಳೆಯಲ್ಲಿ ಸಿಪಿಎಂ ಪಕ್ಷದ ಹೋರಾಟ, ಚಳವಳಿಗಳಲ್ಲಿ ಭಾಗವಹಿಸುತ್ತಿದ್ದ. ತನ್ನ ಚಟುವಟಿಕೆಗಳಿಗಾಗಿ ಹಫ್ತಾ ವಸೂಲಿ ಮಾಡುತ್ತಿದ್ದ. ಹಫ್ತಾ ಕೊಡದ ಅಂಗಡಿ ಮಾಲೀಕರಿಗೆ ಕಿರುಕುಳ ಕೊಡುತ್ತಿದ್ದ. ರಾತ್ರಿ ವೇಳೆ ಕಲ್ಲೆಸೆದು ಭೀತಿ ಹುಟ್ಟಿಸುತ್ತಿದ್ದ. ತನ್ನ ಈ ಚಟುವಟಿಕೆಗಳಿಗೆ ರಾಜಕೀಯ ಬೆಂಬಲ ಬೇಕು ಎಂದು ಅವನಿಗೆ ಮನವರಿಕೆಯಾಯಿತು. ಆತನ ಚಿಕ್ಕಪ್ಪ ಸಹ ಸಿಪಿಎಂ ಸ್ಥಳೀಯ ನಾಯಕನಾಗಿದ್ದ. ಆಗ ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ಅಧಿಕಾರದಲ್ಲಿತ್ತು. ಜನರಲ್ಲಿ ಭೀತಿ ಹುಟ್ಟಿಸಿ ಬಹುಬೇಗ ನಾಯಕನಾಗಬಹುದು ಎಂದು ಅವನಿಗೆ ಅನಿಸಿತು. ಹೀಗಾಗಿ ತನ್ನದೇ ಪುಂಡರ ತಂಡ ಕಟ್ಟಿಕೊಂಡ. ರಾಜಕೀಯವಾಗಿ ಬೆಳೆಯಬೇಕೆಂದರೆ ಹಣ ಮಾಡಬೇಕು ಎಂದು ಅವನಿಗೆ ಅನಿಸಿತು.

ಮೂಲತಃ ಸಂದೇಶಖಾಲಿ ಸೀಗಡಿ ಮೀನು ಕೃಷಿಗೆ ಹೆಸರುವಾಸಿ. ಇಲ್ಲಿನ ಮೀನುಗಳಿಗೆ ದೇಶ-ವಿದೇಶಗಳಲ್ಲಿ ಭಾರಿ ಬೇಡಿಕೆ. ಕೋಲ್ಕೊತಾದಿಂದ ಸಂದೇಶಖಾಲಿಗೆ ಹೋಗುವಾಗ ಸುಮಾರು ಮೂವತ್ತು ಕಿ.ಮೀ. ದೂರದವರೆಗೆ ರಸ್ತೆಯ ಎರಡೂ ಕಡೆಗಳಲ್ಲಿ ಸೀಗಡಿ ಮೀನಿನ ಕೃಷಿ ಭೂಮಿ (ಕೆರೆಯಂತಿರುವ ವಿಶಾಲ ಹೊಂಡ) ಕಾಣಿಸುತ್ತದೆ. ಏನಿಲ್ಲವೆಂದರೂ ಒಂದೂವರೆ ಲಕ್ಷ ಎಕರೆ ಭೂಪ್ರದೇಶಗಳಲ್ಲಿ ಈ ಕೃಷಿ ನಡೆಯುತ್ತಿರಬಹುದು. ಶಹಜಾನ್ ಶೇಕ್ ತನ್ನ ಬೆಂಬಲಿಗರೊಂದಿಗೆ ಹೋಗಿ, ಈ ಭೂಮಿಯನ್ನು ಬಿಟ್ಟು ಕೊಡಬೇಕೆಂದು ಧಮಕಿ ಹಾಕಿ ತಾಕೀತು ಮಾಡುತ್ತಿದ್ದ. ದೂಸರಾ ಮಾತಾಡದೇ ಭೂಮಿಯನ್ನು ಬಿಟ್ಟುಕೊಟ್ಟರೆ ಚೂರುಪಾರು ಹಣ ಕೊಡುತ್ತಿದ್ದ. ಪ್ರತಿರೋಧ ಒಡ್ಡಿದರೆ, ಬಲವಂತವಾಗಿ ನಯಾಪೈಸೆಯನ್ನೂ ಕೊಡದೇ ಜಮೀನನ್ನು ಕಿತ್ತುಕೊಳ್ಳುತ್ತಿದ್ದ. ಪೊಲೀಸರಿಗೆ ದೂರು ನೀಡಿದರೆ ಅವರ ಕಥೆ ಮುಗೀತ್. ಶೇಕ್ ಯಾರ ಭೂಮಿಯ ಮೇಲೆ ಕಣ್ಣು ಹಾಕಲಿ, ಆತ ಕೇಳಿದ ಹಣಕ್ಕೆ ಕೊಟ್ಟು ಜಾಗ ಖಾಲಿ ಮಾಡುತ್ತಿದ್ದರು. ಈ ರೀತಿ ಆತ ಐದು ಸಾವಿರಕ್ಕೂ ಅಧಿಕ ಎಕರೆ ಸೀಗಡಿಮೀನು ಕೃಷಿಭೂಮಿಯನ್ನು ಲಪಟಾಯಿಸಿದ್ದ. ನೋಡನೋಡುತ್ತಿದ್ದಂತೆ ಶೇಕ್ ಆ ಪ್ರದೇಶದ ದೊಡ್ಡ ಭೂಮಾಲೀಕನಾದ. ಆತನ ರಕ್ಷಣೆಗೆ ಶಾಸಕರು ಮತ್ತು ಸಂಸದರು ಮುಂದಾದರು. ಅವರಿಗೆ ಶೇಕ್ ಕೇಳಿದಷ್ಟು ಹಣ ನೀಡುತ್ತಿದ್ದ. ಜ್ಯೋತಿಪ್ರಿಯ ಮಲ್ಲಿಕ್ ಕೂಡ ಶೇಕ್‌ಗೆ ಪರಿಚಯವಾಗಿದ್ದು ಹಾಗೇ.

ಆ ದಿನಗಳಲ್ಲಿ ಸಿಪಿಎಂ ಕ್ಷೀಣಿಸಿ, ದೀದಿಯ ಟಿಎಂಸಿ ಪ್ರವರ್ಧಮಾನಕ್ಕೆ ಬರಲಾರಂಭಿಸಿತ್ತು. ಹೀಗಿರುವಾಗ 2013ರ ಒಂದು ದಿನ ಶೇಕ್ ಟಿಎಂಸಿ ಸೇರಿಬಿಟ್ಟ!

ಅಷ್ಟೊತ್ತಿಗೆ ಶಹಜಾನ್ ಶೇಕ್ ಸಂದೇಶಖಾಲಿ ಮತ್ತು ಸುತ್ತಮುತ್ತಲ ಊರುಗಳಲ್ಲಿ ತನ್ನ ಸಾಮ್ರಾಜ್ಯವನ್ನು ಕಟ್ಟಿಕೊಂಡಿದ್ದ. ಆತನ ಸಹಾಯವಿಲ್ಲದೇ ಚುನಾವಣೆಯಲ್ಲಿ ಆರಿಸಿ ಬರುವುದು ಸಾಧ್ಯವೇ ಇಲ್ಲ ಎಂದು ರಾಜಕೀಯ ನಾಯಕರಿಗೆ ಪಕ್ಕಾ ಆಗಿತ್ತು. ಆತ ತನ್ನ ವ್ಯಾಪ್ತಿಯಲ್ಲಿರುವ ಕೂಲಿಕಾರರಿಗೆ, ಅಂಗಡಿಕಾರರಿಗೆ ಬಡ್ಡಿಗೆ ಹಣ ನೀಡುತ್ತಿದ್ದುದರಿಂದ ಅವರೆಲ್ಲ ತನ್ನ ಹಂಗು-ಹಿಡಿತದಲ್ಲಿರುವಂತೆ ನೋಡಿಕೊಂಡ. ಸುತ್ತಮುತ್ತಲ ಹತ್ತಾರು ಊರುಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸಿ, ಅಂಗಡಿಗಳನ್ನು ಬಾಡಿಗೆಗೆ ನೀಡಲಾರಂಭಿಸಿದ. ತನ್ನ ಸಹಾಯವಿಲ್ಲದೇ ಯಾವ ದಂಧೆಯನ್ನೂ ಮಾಡಲು ಸಾಧ್ಯವಿಲ್ಲ ಎಂಬ ಅವಲಂಬನೆಯನ್ನು ಸೃಷ್ಟಿಸಿದ. ಸೀಗಡಿ ಮೀನಿನ ಕೃಷಿಯಿಂದ ದಿನಕ್ಕೆ ಲಕ್ಷ ಲಕ್ಷ ಹಣ ಹರಿದು ಬರಲಾರಂಭಿಸಿತು. ರಾಜಕೀಯ ನಾಯಕರಿಗೆ ಶೇಕ್ ಕಾಮಧೇನುವಾದ.

ಈ ಮಧ್ಯೆ ಶೇಕ್‌ನ ಶೋಕಿಗಳೂ ಹೆಚ್ಚಾದವು. ಸಂದೇಶಖಾಲಿಯಲ್ಲಿ ಯಾವುದೇ ಹೆಣ್ಣುಮಗಳು ಆತನ ಕಾಕದೃಷ್ಟಿಗೆ ಬಿದ್ದರೆ ಅವಳನ್ನು ಎತ್ತಾಕಿಕೊಂಡು ಬರುವಂತೆ ತನ್ನ ಸಹಚರರಿಗೆ ಸೂಚಿಸುತ್ತಿದ್ದ. ಶೇಕ್‌ನನ್ನು ಸಂತೃಪ್ತಗೊಳಿಸಲು ಆತನ ಸಹಚರರು ಹೆಣ್ಣುಗಳ ಬೇಟೆ ಆರಂಭಿಸಿದರು. ಕೆಲವರಂತೂ ಶೇಕ್‌ನ ಹೆಣ್ಣುಬಾಕತನವನ್ನು ನೋಡಿ, ಊರು ಖಾಲಿ ಮಾಡಿಕೊಂಡು ಹೋದರು. ತನ್ನ ಕೋರಿಕೆಯನ್ನು ಮನ್ನಿಸದ ಹೆಣ್ಣುಮಕ್ಕಳ ಮಾನಭಂಗಕ್ಕೂ ಆತ ಹೇಸುತ್ತಿರಲಿಲ್ಲ. ಮಧ್ಯರಾತ್ರಿ ಶೇಕ್‌ನ ಸಹಚರರು ಯಾರ ಮನೆಗಳನ್ನು ನುಗ್ಗುತ್ತಾರೆ ಎಂದು ಜನ ಭಯಭೀತರಾಗಿ ಕಾಲ ಕಳೆಯುವಂತಾಯಿತು. ಇಂದು ಸಂದೇಶಖಾಲಿಯಲ್ಲಿ ಶೇಕ್ ಯಾವ ಹೆಣ್ಣು ಮಕ್ಕಳ ಮೇಲೆ ಕಣ್ಣು ಹಾಕಿರಬಹುದು ಎಂದು ಜನ ಮಾತಾಡಿಕೊಳ್ಳುತ್ತಿದ್ದರು. ಆತ ಏನಿಲ್ಲವೆಂದರೂ ಮುನ್ನೂರಕ್ಕೂ ಹೆಚ್ಚು ಹೆಣ್ಣುಮಕ್ಕಳ ಮೇಲೆ ಲೈಂಗಿಕ ಕಿರುಕುಳ, ದೌರ್ಜನ್ಯ, ಅತ್ಯಾಚಾರ ನಡೆಸಿರಬಹುದು, ಆದರೆ ಯಾರೂ ಆತನ ವಿರುದ್ಧ ದೂರು ನೀಡುವ ಧೈರ್ಯವನ್ನೂ ಮಾಡಲಿಲ್ಲ. ಅಷ್ಟಾಗಿಯೂ ಆತನ ವಿರುದ್ಧ ಎಂಟು ಲೈಂಗಿಕ ಕಿರುಕುಳದ ದೂರುಗಳು ದಾಖಲಾಗಿದ್ದವು. ಆದರೆ ಅವನ ವಿರುದ್ಧ ಕ್ರಮಕ್ಕೆ ಪೊಲೀಸರೂ ಮುಂದಾಗಲೇ ಇಲ್ಲ.

ಯಾವಾಗ ಶಹಜಾನ್ ಶೇಕ್, ಇ.ಡಿ. ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ ಪರಾರಿಯಾದನೋ, ಆತನಿಂದ ಲೈಂಗಿಕ ದೌರ್ಜನ್ಯ, ಕಿರುಕುಳಕ್ಕೊಳಗಾದ ಹೆಂಗಸರು ಧೈರ್ಯ ಮಾಡಿ, ಕೈಯಲ್ಲಿ ಪೊರಕೆ ಮತ್ತು ಕೋಲನ್ನು ಹಿಡಿದುಕೊಂಡು ಶಹಜಾನ್ ಶೇಕ್‌ನನ್ನು ಬಂಧಿಸಬೇಕು ಎಂದು ಬೀದಿಗಿಳಿದರು. ತಮ್ಮ ಜಮೀನುಗಳನ್ನು ಕಳೆದುಕೊಂಡವರೂ ಈ ಮಹಿಳೆಯರ ಪ್ರತಿಭಟನೆಗೆ ಸೇರಿಕೊಂಡರು. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಶೇಕ್ ಒಂದೇ ಒಂದು ಅಕ್ರಮ ಎಸಗಿಲ್ಲ, ಆತನ ವಿರುದ್ಧ ಯಾವ ಪೊಲೀಸ್ ಠಾಣೆಯಲ್ಲೂ ದೂರು ಸಹ ದಾಖಲಾಗಿಲ್ಲ ಎಂದು ಟಿಎಂಸಿಯ ಹಿರಿಯ ನಾಯಕರು ಆತನ ಸಮರ್ಥನೆಗೆ ಮುಂದಾದರು. ಘಟನೆ ನಡೆದು ಒಂದೂವರೆ ತಿಂಗಳಾದರೂ ಪೊಲೀಸರು ಶೇಕ್‌ನನ್ನು ಬಂಧಿಸಲಿಲ್ಲ. ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿ ಹೊಲಸು ರಾಜಕಾರಣ ಮಾಡುತ್ತಿದೆ ಎಂದು ಟಿಎಂಸಿ ನಾಯಕರು ಸತ್ಯವನ್ನು ಮರೆಮಾಚಲು ಮುಂದಾದರು. ಎಲ್ಲ ನಾಯಕರೂ ಶೇಕ್‌ನ ಬೆಂಬಲಕ್ಕೆ ನಿಂತುಬಿಟ್ಟರು. ಸಂದೇಶಖಾಲಿಗೆ ಬಿಜೆಪಿ ಶಾಸಕರು, ಸಂಸದರು ಹೋಗದಂತೆ ಟಿಎಂಸಿ ಸರಕಾರ ನಿರ್ಬಂಧ ವಿಧಿಸಿತು.

ಈ ಮಧ್ಯೆ ಶೇಕ್‌ನ ಸಹಚರರಾದ ಹಜ್ರಾ ಮತ್ತು ಸರ್ದಾರ್‌ನನ್ನು ಪೊಲೀಸರು ಬಂಧಿಸಿದರು. ಪಾಕಿಸ್ತಾನ ಮತ್ತು ಇರಾಕಿನಲ್ಲೂ ಮಹಿಳೆಯರ ಮೇಲೆ ಈ ರೀತಿ ದೌರ್ಜನ್ಯ ನಡೆದಿಲ್ಲ ಎಂದು ಲೋಕಸಭೆಯಲ್ಲಿ ಬಿಜೆಪಿ ಸಂಸದರು ಬೊಬ್ಬೆ ಹಾಕಿದರು. ಪಶ್ಚಿಮ ಬಂಗಾಳ ಸರಕಾರಕ್ಕೆ ಕೋಲ್ಕೊತಾ ಹೈಕೋರ್ಟ್ ಛೀಮಾರಿ ಹಾಕಿತು. ಶಹಜಾನ್ ಶೇಕ್‌ಗೆ ಶರಣಾಗುವಂತೆ ಸೂಚಿಸಿತು. ಸಂದೇಶಖಾಲಿಯಲ್ಲಿ ಶೇಕ್‌ನಿಂದ ತೊಂದರೆಗೊಳಗಾದ ಪ್ರತಿಯೊಬ್ಬರ ಅಭಿಪ್ರಾಯವನ್ನು ಪಡೆಯುವುದಾಗಿ ಪಶ್ಚಿಮ ಬಂಗಾಳ ಡಿಜಿಪಿ ಕೋರ್ಟಿಗೆ ಹೇಳಬೇಕಾಯಿತು. ಶೇಕ್ ವಶಪಡಿಸಿಕೊಂಡಿದ್ದ ಮಕ್ಕಳ ಉದ್ಯಾನವನ್ನು ಮರಳಿ ಪಡೆಯಲಾಯಿತು. ಶೇಕ್‌ನ ಆಸ್ತಿ-ಪಾಸ್ತಿಗಳಿಗೆ ಬೆಂಕಿ ಹಚ್ಚಲಾಯಿತು. 'ನನ್ನ ಪಕ್ಷ ಶೇಕ್‌ನನ್ನು ರಕ್ಷಿಸುತ್ತಿಲ್ಲ. ಆತನ ವಿರುದ್ಧದ ತನಿಖೆಗೆ ಕೋಲ್ಕೊತಾ ಹೈಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಅವನನ್ನು ಬಂಧಿಸಿಲ್ಲ' ಎಂದು ಟಿಎಂಸಿ ಪ್ರಧಾನ ಕಾರ್ಯದರ್ಶಿ ಮತ್ತು ದೀದಿ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಹೇಳಿದ. 'ತಕ್ಷಣ ಶೇಕ್‌ನನ್ನು ಬಂಧಿಸಿ. ಆತನ ವಿರುದ್ಧದ ತನಿಖೆಗೆ ತಡೆಯಾಜ್ಞೆ ನೀಡಿಲ್ಲ' ಎಂದು ಕೋರ್ಟ್ ಸ್ಪಷ್ಟಪಡಿಸಿತು. ಕೋರ್ಟ್ ಅನುಮತಿ ಪಡೆದು ಬಿಜೆಪಿ ನಾಯಕ ಸುವೆಂದು ಅಧಿಕಾರಿ ಸಂದೇಶಖಾಲಿಗೆ ಭೇಟಿ ನೀಡಬೇಕಾಯಿತು. ಘಟನೆ ನಡೆದ ಎರಡು ತಿಂಗಳ ಬಳಿಕ ಶಹಜಾನ್ ಶೇಕ್‌ನನ್ನು ಪೊಲೀಸರು ಬಂಧಿಸಿದರು.

ಆತ ಆ ಎರಡು ತಿಂಗಳು ಎಲ್ಲಿದ್ದ ಎನ್ನುವುದು ಪೊಲೀಸರಿಗೆ ಗೊತ್ತಿತ್ತು. ಸರಕಾರವೇ ಆತನಿಗೆ ರಾಜಾಶ್ರಯ ನೀಡಿತ್ತು. ಎಲ್ಲೆಡೆಗಳಿಂದ ಒತ್ತಡಗಳು ಹೆಚ್ಚಲಾರಂಭಿಸಿ, ಇನ್ನು ಆತನಿಗೆ ರಕ್ಷಣೆ ನೀಡುವುದು ಸಾಧ್ಯವೇ ಇಲ್ಲ ಎಂದು ಅರಿವಾದಾಗ ಶೇಕ್‌ನನ್ನು ಪೊಲೀಸರಿಗೆ ಒಪ್ಪಿಸಲಾಯಿತು. ಶೇಕ್‌ನ ದೌರ್ಜನ್ಯ, ದರ್ಪ, ದೌಲತ್ತು, ಅಮಾನವೀಯ ಕೃತ್ಯಗಳದು ಒಂದು ಕರುಣಾಜನಕ ಕತೆಯಾದರೆ, ಆ ಎರಡು ತಿಂಗಳು ಆತ ಎಲ್ಲಿದ್ದ ಎಂಬುದು ಪತ್ತೆಯಾದರೆ ಅದು ಇದಕ್ಕಿಂತ ಕರಾಳ ಕತೆ. ಕಾರಣ ಆತ ಟಿಎಂಸಿ ಸರಕಾರದ ಮೂಗಿನ ಅಡಿಯಲ್ಲೇ ಮಲಗಿದ್ದ!

ಸಂದೇಶಖಾಲಿಯಲ್ಲಿ ನಡೆದ ಕಳೆದ ನಾಲ್ಕು ತಿಂಗಳ ವಿದ್ಯಮಾನಗಳನ್ನು ಕೇಳಿದ ಯಾರಿಗಾದರೂ ಭವಿಷ್ಯದ ಭರವಸೆಗಳೆಲ್ಲ ಖಾಲಿಯಾದ ಅನುಭವವಾದರೆ ಆಶ್ಚರ್ಯವಿಲ್ಲ. ಬಾಂಗ್ಲಾದೇಶದ ಗಡಿಗೆ ಹತ್ತಿರವಿರುವ, ಸುಂದರಬನದ ಪ್ರದೇಶದಲ್ಲಿರುವ ಸಂದೇಶಖಾಲಿ ಇಡೀ ಜಗತ್ತಿಗೆ ಕಳಿಸಿದ ಸಂದೇಶ ಮಾತ್ರ ಖಾಲಿ ಖಾಲಿ!

ಪ್ರಜಾಪ್ರಭುತ್ವದ ಹಬ್ಬದಲ್ಲಿ ಜನರಿಗೆ ಏಕೆ ಈ ನಿರಾಸಕ್ತಿ?

ಈ ದೇಶದ ಜನರಿಗೆ ಮತದಾನದಲ್ಲಿ ಯಾಕೆ ಈ ಪರಿಯ ನಿರಾಸಕ್ತಿಯಿದೆ ಎಂಬುದರ ಬಗ್ಗೆ ಗಂಭೀರವಾಗಿ ವಿಮರ್ಶೆ ಮಾಡುವ ಅಗತ್ಯವಿದೆ. 'ನನ್ನ ಒಂದು ಮತದಿಂದ ಏನು ವ್ಯತ್ಯಾಸವಾಗುತ್ತದೆ' ಎಂದುಕೊಂಡು ಕೆಲವರು ಮತದಾನದಿಂದ ದೂರ ಉಳಿಯುತ್ತಾರೆ. ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸದೆ ಇರುವ ಆಯ್ಕೆಯನ್ನು ಆಶ್ರಯಿಸಿದರೆ ಸರಕಾರವನ್ನು ಟೀಕಿಸುವ ಹಕ್ಕನ್ನೂ ಕಳೆದುಕೊಳ್ಳುತ್ತಾರೆ.

ಸಂಗತ

ಡಾ.ವಿಜಯ್ ದರಡಾ

vveditoped@gmail.com

ಲೋಕಸಭೆ ಚುನಾವಣೆಯ ಮೊದಲ ಹಂತದಲ್ಲಿ 102 ಸ್ಥಾನಗಳಿಗೆ ಮತದಾನ ಮುಗಿದಿದೆ. ಯಾರು ಸೋಲುತ್ತಾರೆ, ಯಾರು ಗೆಲ್ಲುತ್ತಾರೆ ಎಂಬ ಬಗ್ಗೆ ರಾಜಕೀಯ ವಿಮರ್ಶಕರು ಚರ್ಚೆಯಲ್ಲಿ ಬ್ಯುಸಿಯಾಗಿದ್ದಾರೆ. ರಾಜಕೀಯ ಪಕ್ಷಗಳ ಒಳಗೆ ನಡೆಯುತ್ತಿರುವ ಆಂತರಿಕ ತುಮುಲಗಳ ಬಗ್ಗೆಯೂ ಅವರು ಗಮನ ಹರಿಸಿದ್ದಾರೆ. ಬಂಡೆದ್ದು ಸ್ಪರ್ಧಿಸಿರುವ ತಮ್ಮದೇ ಪಕ್ಷದ ಅಭ್ಯರ್ಥಿಗಳನ್ನು ಸಮಾಧಾನಪಡಿಸಲು ನಾಯಕರು ಕೈಗೊಂಡಿರುವ ಕ್ರಮಗಳನ್ನೂ ರಾಜಕೀಯ ಪಂಡಿತರು ಗಮನಿಸುತ್ತಿದ್ದಾರೆ.

ಅದಕ್ಕಿಂತ ಹೆಚ್ಚಾಗಿ ರಾಜಕೀಯ ವಿಶ್ಲೇಷಕರು ಮೊದಲ ಹಂತದ ಚುನಾವಣೆಯಲ್ಲಿ ಮತದಾನದ ಶೇಕಡಾವಾರನ್ನು ಗಮನಿಸುತ್ತಿದ್ದಾರೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಆದ ಮತದಾನದ ಸರಾಸರಿಯನ್ನು ಕಳೆದ ಚುನಾವಣೆಗಳಿಗೆ ಹೋಲಿಸಿ ನೋಡುತ್ತಿದ್ದಾರೆ. ಈ ಬಾರಿ ಮತದಾನದ ಪ್ರಮಾಣ ಕಡಿಮೆಯಾಗಿದ್ದರೆ ಯಾರು ಗೆಲ್ಲಬಹುದು, ಕಳೆದ ಬಾರಿಗಿಂತ ಹೆಚ್ಚು ಮತದಾನವಾಗಿದ್ದರೆ ಯಾರು ಗೆಲ್ಲಬಹುದು ಎಂಬುದರ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ಮತದಾನ ಮುಗಿದ ಮೇಲೆ ಈ ರೀತಿಯ ಲೆಕ್ಕಾಚಾರಗಳು ಸಹಜ. ಹಾಗೆಯೇ, ಜೂನ್ 4ಕ್ಕೆ ಫಲಿತಾಂಶ ಪ್ರಕಟವಾಗುವವರೆಗೆ ಕುತೂಹಲ ಉಳಿಸಿಕೊಳ್ಳಲು ಚರ್ಚೆಗೆ ಏನಾದರೂ ಮಸಾಲೆ ಬೇಕಲ್ಲ! ಹೀಗಾಗಿ ಇಂಥ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ಪ್ರತಿ ಹಂತದ ಮತದಾನ ಮುಗಿದ ಬಳಿಕವೂ ಅವು ಸ್ವಲ್ಪ ಹೆಚ್ಚು ಕಾವು ಪಡೆಯುತ್ತವೆ. ಆದರೆ ನನಗಿರುವ ಬಹಳ ಮುಖ್ಯವಾದ ಕಳಕಳಿ ಮತ್ತು ಕಳವಳ ಇದಾವುದೂ ಅಲ್ಲ.

ನಮ್ಮದು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ. ಇಲ್ಲಿ ಚುನಾವಣೆ ಅಂದರೆ ಪ್ರಜಾಪ್ರಭುತ್ವದ ದೊಡ್ಡ ಹಬ್ಬ. ಮತದಾರರಿಗೆ ಇದೊಂದು ಸಂಭ್ರಮಾಚರಣೆ. ಈ ಸಲ ಹೆಚ್ಚು ಮತದಾನ ಆಗಬೇಕು ಎಂದು ಚುನಾವಣಾ ಆಯೋಗ ಕೂಡ ಸಾಕಷ್ಟು ಪ್ರಯತ್ನಪಟ್ಟು ಮತದಾರರಲ್ಲಿ ಜಾಗೃತಿ ಮೂಡಿಸಲು ಯತ್ನಿಸಿದೆ. ತನ್ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಮತದಾರರನ್ನು ಮತಗಟ್ಟೆಗಳಿಗೆ ಕರೆತರುವ ಪ್ರಯತ್ನ ಮಾಡಿದೆ. ಆದರೂ ಮೊದಲ ಹಂತದಲ್ಲಿ ಅಷ್ಟೊಂದು ಕಡಿಮೆ ಮತದಾನವಾಗಿದ್ದು ಏಕೆ? ಮೊದಲ ಹಂತದ ಮತದಾನಕ್ಕಿಂತ ಮೊದಲು ನಾನು ಎರಡು ದಿನಗಳ ಕಾಲ ದೇಶದ ಬೇರೆ ಬೇರೆ ಕಡೆ 1,400 ಕಿ.ಮೀ. ದೂರವನ್ನು ರಸ್ತೆ ಮಾರ್ಗದಲ್ಲಿ ಪ್ರಯಾಣಿಸಿದ್ದೇನೆ. ಬೇರೆ ಬೇರೆ ರಾಜ್ಯಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಜನಸಾಮಾನ್ಯರ ಜತೆ ಮಾತನಾಡಿ, ಹರಟೆ ಹೊಡೆದು, ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ವಿಶೇಷವಾಗಿ ಯುವಕರ ಮನಸ್ಥಿತಿ ನನ್ನ ಗಮನ ಸೆಳೆದಿದೆ. 2014ರಲ್ಲಿ ನರೇಂದ್ರ ಮೋದಿ ಮೊದಲ ಬಾರಿ ಜಯಭೇರಿ ಬಾರಿಸಿದ ಚುನಾವಣೆಯಲ್ಲಿ ಮೋದಿ ಬಗ್ಗೆ ಯುವಕರಿಗೆ ಇದ್ದ ಕುತೂಹಲ ಹಾಗೂ ಕ್ರೇಜ್ ಈಗ ಇಲ್ಲ. ಅದೇನಾದರೂ ಇರಲಿ, ಮತದಾರರ ಒಟ್ಟಾರೆ ಉತ್ಸಾಹಕ್ಕೆ ಏನಾಯಿತು?

ಯುವಕರೇ ನಮ್ಮ ದೇಶದ ಭವಿಷ್ಯ. ಅವರ ಕೈಲೇ ಭಾರತದ ಅಭಿವೃದ್ಧಿಯ ಸೂತ್ರವಿದೆ. ಅವರನ್ನು ಅನ್ಯಮನಸ್ಕತೆಯು ಸೆಳೆದರೆ ಅದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ಏಕೆಂದರೆ ನವಭಾರತವನ್ನು ರೂಪಿಸುವವರೇ ಅವರು! ಈ ಸಲದ ಚುನಾವಣೆಯಲ್ಲಿ ಕಡಿಮೆ ಮತದಾನವಾಗುತ್ತದೆ ಎಂದು ನಾನು ಮೊದಲೇ ಊಹಿಸಿದ್ದೆ. ದುರದೃಷ್ಟವಶಾತ್ ಅದು ಹಾಗೇ ಆಗಿದೆ. ಮತದಾನದ ಪ್ರಮಾಣ ಎರಡರಿಂದ ಮೂರು ಪ್ರತಿಶತ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಎರಡು ರೀತಿಯ ಮತದಾರರಿದ್ದಾರೆ. ಒಂದು, ನಗರ ಪ್ರದೇಶದಲ್ಲಿ ವಾಸಿಸುವ ಮತದಾರರು. ಎರಡು, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮತದಾರರು. ಆಡಳಿತ ಮತ್ತು ವಿರೋಧ ಪಕ್ಷಗಳು ಈ ವಿಷಯದಲ್ಲಿ ನಡೆಸಿರುವ ಆರೋಪ ಪ್ರತ್ಯಾರೋಪಗಳ ಚರ್ಚೆಗೆ ನಾನು ಹೋಗುವುದಿಲ್ಲ, ಆದರೆ ಈ ಎರಡೂ ವರ್ಗದ ಮತದಾರರಲ್ಲಿ ಮತದಾನದ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದು ನನ್ನ ಗಮನಕ್ಕೆ ಬಂದಿದೆ.

ನಾಗ್ಪುರ ಕ್ಷೇತ್ರದ ಉದಾಹರಣೆ ತೆಗೆದುಕೊಳ್ಳೋಣ. ಕೇಂದ್ರ ಸಚಿವ ಹಾಗೂ ಹಿರಿಯ ಬಿಜೆಪಿ ನಾಯಕ ನಿತಿನ್ ಗಡ್ಕರಿ ಅವರು ಪ್ರತಿನಿಧಿಸುವ ಕ್ಷೇತ್ರವಿದು. ಅವರು 'ವಿಕಾಸ್ ಪುರುಷ' ಎಂಬ ಹಣೆಪಟ್ಟಿಯೊಂದಿಗೆ ಸ್ಪರ್ಧಿಸುತ್ತಿದ್ದರೆ, ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ವಿಕಾಸ್ ಠಾಕ್ರೆ ತಮ್ಮನ್ನು ತಾವು ಜನಸಾಮಾನ್ಯರ ಪ್ರತಿನಿಧಿ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಆದರೆ ಇಲ್ಲಿ ಮತದಾನದ ಪ್ರಮಾಣ ಬಹಳ ಕಡಿಮೆ ಆಗಿದೆ. ತುಂಬಾ ಬೇಸರದ ವಿಷಯವಿದು. ಹೆಚ್ಚಿನ ವಾರ್ಡುಗಳಲ್ಲಿ ಕೇವಲ ಶೇ.42 ಅಥವಾ ಶೇ.43ರಷ್ಟು ಮತದಾನವಾಗಿದೆ. ಇದು ಏನನ್ನು ಸೂಚಿಸುತ್ತದೆ?

ಹಾಗೆ ನೋಡಿದರೆ ನಮ್ಮ ದೇಶದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಗೆ ಹೋಲಿಸಿದರೆ ಮತದಾನದ ಪ್ರಮಾಣದಲ್ಲಿ ಈಗ ಸಾಕಷ್ಟು ಸುಧಾರಣೆಯಾಗಿದೆ. ಆದರೆ ಈಗಿನ ಮತದಾನದ ಪ್ರಮಾಣದ ಬಗ್ಗೆ ನಾವು ತೃಪ್ತಿ ಪಡಬೇಕೇ ಬೇಡವೇ ಎಂಬುದು ಪ್ರಶ್ನೆ. 100 ಜನರು ಮತದಾನ ಮಾಡಬೇಕಾದ ಜಾಗದಲ್ಲಿ 42-43 ಜನರು ಮತದಾನ ಮಾಡಿದರೆ ಸಾಕಾ? ದೇಶದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದಿದ್ದು 1951ರ ಅಕ್ಟೋಬರ್ ತಿಂಗಳಿನಿಂದ 1952ರ ಫೆಬ್ರವರಿಯವರೆಗೆ. ಲೋಕಸಭೆಯ 489 ಕ್ಷೇತ್ರಗಳು ಹಾಗೂ ವಿವಿಧ ರಾಜ್ಯಗಳ ವಿಧಾನಸಭೆಯ 4,011 ಕ್ಷೇತ್ರಗಳಿಗೆ ಆಗ ಒಟ್ಟಿಗೇ ಚುನಾವಣೆ ನಡೆದಿತ್ತು. ಆಗ ದೇಶದಲ್ಲಿ ಇದ್ದುದು ಒಟ್ಟು 17.32 ಕೋಟಿ ಮತದಾರರು. ಅವರ ಪೈಕಿ ಹೆಚ್ಚುಕಮ್ಮಿ ಶೇ.44ರಷ್ಟು ಜನರು ಮಾತ್ರ ಮತದಾನ ಮಾಡಿದ್ದರು. ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಗೆದ್ದಿತ್ತು. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 364 ಸೀಟು ಪ್ರಾಪ್ತವಾಗಿತ್ತು. ಬಹುತೇಕ ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷವೇ ಗೆದ್ದಿತ್ತು. ಆ ಐತಿಹಾಸಿಕ ಪ್ರಥಮ ಚುನಾವಣೆ ನಡೆದು ಈಗ ಏಳು ದಶಕಗಳು ಕಳೆದಿವೆ. ಈಗಲೂ ಸರಾಸರಿ ಮತದಾನದ ಪ್ರಮಾಣ ಶೇ.70ಕ್ಕಿಂತ ಕಡಿಮೆ ಇದೆ. ಏಕೆ ಮತದಾನದ ಪ್ರಮಾಣ ಜಾಸ್ತಿಯಾಗಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಹಾಗೆ ನೋಡಿದರೆ ಕೆಲ ರಾಜ್ಯಗಳು, ವಿಶೇಷವಾಗಿ ಈಶಾನ್ಯ ಭಾರತದ ರಾಜ್ಯಗಳು, ಈ ವಿಷಯದಲ್ಲಿ ಮುಂದಿವೆ. ಅಲ್ಲಿ ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಚುನಾವಣೆಗಳಲ್ಲಿ ಹೆಚ್ಚು ಮತದಾನವಾಗುತ್ತದೆ. ಆದರೆ ಮತದಾನದ ಪ್ರಮಾಣದಲ್ಲಿ ಇರುವ ಈ ವ್ಯತ್ಯಾಸಕ್ಕೆ ಏನು ಕಾರಣ? ಏಕೆ ದೇಶಾದ್ಯಂತ ಒಂದೇ ಪ್ರಮಾಣದಲ್ಲಿ ಮತದಾನವಾಗುವುದಿಲ್ಲ?

ಉದಾಹರಣೆಗೆ, ಇತ್ತೀಚೆಗೆ ನಡೆದ ಮೊದಲ ಹಂತದ ಮತದಾನವನ್ನೇ ಗಮನಿಸಿದರೆ ತ್ರಿಪುರಾದಲ್ಲಿ ಅತಿ ಹೆಚ್ಚು ಶೇ.80ರಷ್ಟು ಮತದಾನವಾಗಿದೆ. ಇನ್ನುಳಿದಂತೆ ಶೇ.70ಕ್ಕಿಂತ ಹೆಚ್ಚು ಮತದಾನವಾಗಿರುವುದು ಪಶ್ಚಿಮ ಬಂಗಾಳ, ಮೇಘಾಲಯ, ಅಸ್ಸಾಂ, ಸಿಕ್ಕಿಂ ಮತ್ತು ಪುದುಚೇರಿಯಲ್ಲಿ ಮಾತ್ರ. ನಾನೊಂದು ಸಂಗತಿ ಗಮನಿಸಿದ್ದೇನೆ. ಬಹುಶಃ ನೀವೂ ಗಮನಿಸಿರುತ್ತೀರಿ. ತುಂಬಾ ಜನರು ಮತದಾನದ ದಿನವನ್ನು ರಜೆಯ ದಿನ ಎಂದುಕೊಳ್ಳುತ್ತಾರೆ. ಆವತ್ತು ಮತದಾನ ಮಾಡಲೆಂದು ಸರಕಾರ ರಜೆ ನೀಡಿದರೆ, ಇವರು ಹಾಯಾಗಿ ಕಾಲ ಕಳೆಯಲು ರಜೆ ಸಿಕ್ಕಿದೆ ಎಂದುಕೊಳ್ಳುತ್ತಾರೆ. ಅವರಲ್ಲಿ ಅನೇಕರು 'ನನ್ನ ಒಂದು ಮತದಿಂದ ಏನು ವ್ಯತ್ಯಾಸವಾಗುತ್ತದೆ' ಎಂದುಕೊಂಡು ಮತದಾನದಿಂದ ದೂರ ಉಳಿಯುತ್ತಾರೆ. ದುರದೃಷ್ಟವಶಾತ್ ಬಹಳ ಜನರು ಹೀಗೇ ಅಂದುಕೊಂಡು ಮತ ಚಲಾಯಿಸದೆ ಇರುವುದರಿಂದ ದೊಡ್ಡ ಪ್ರಮಾಣದ ಜನರು ಮತದಾನ ಮಾಡದೆ ಉಳಿದಂತಾಗುತ್ತದೆ. ಶೇ.30ರಷ್ಟು ಬೃಹತ್ ಪ್ರಮಾಣದ ಜನರು ಮತದಾನದಿಂದ ದೂರವುಳಿದರೆ ಅದರರ್ಥ ಅಷ್ಟು ಜನರು ದೇಶದ ಆಡಳಿತದಲ್ಲಿ ಭಾಗವಹಿಸುತ್ತಿಲ್ಲ ಎಂದು. ನೀವು ನಿಮ್ಮ ಮತದಾನದ ಹಕ್ಕನ್ನು ಚಲಾಯಿಸದೆ ಇರುವ ಆಯ್ಕೆಯನ್ನು ಆಶ್ರಯಿಸಿದರೆ ಸರಕಾರವನ್ನು ಟೀಕಿಸುವ ಹಕ್ಕನ್ನು ಕೂಡ ಕಳೆದುಕೊಳ್ಳುತ್ತೀರಿ. ವೈಯಕ್ತಿಕವಾಗಿ ನನಗೆ ಅನ್ನಿಸುವುದೇನೆಂದರೆ, ಒಬ್ಬ ಮತದಾರ ಯಾವುದೇ ಗಂಭೀರವಾದ ಕಾರಣವಿಲ್ಲದೆ ಮತದಾನ ಮಾಡುವುದಿಲ್ಲ ಅಂತಾದರೆ ಅವನಿಗೆ ಸರಕಾರ ನೀಡುವ ಸೌಕರ್ಯಗಳು ಬೇಕು, ಆದರೆ ಸರಕಾರವನ್ನು ಚುನಾಯಿಸುವ ಜವಾಬ್ದಾರಿ ಬೇಡ ಎಂದರ್ಥ. ಪುಕ್ಕಟೆಯಾಗಿ ಸರಕಾರದ ಸವಲತ್ತುಗಳನ್ನು ಅನುಭವಿಸುವುದೇ ಅವನಿಗಿಷ್ಟ.

ಇನ್ನೊಂದು ಸಂಗತಿ ಗಮನಿಸಿದ್ದೀರಾ? ಗುಡ್ಡಗಾಡು ಪ್ರದೇಶದಲ್ಲಿ, ಬುಡಕಟ್ಟು ಜನರು ವಾಸಿಸುವ ಭಾಗಗಳಲ್ಲಿ ಮತದಾನ ಹೆಚ್ಚಾಗುತ್ತಿದೆ. ರಾಜಕೀಯದ ಬಗ್ಗೆ ತಿಳಿದುಕೊಂಡಿರುವ ಸುಶಿಕ್ಷಿತರು ಇರುವ ಸ್ಥಳಗಳಲ್ಲಿ ಮತದಾನ ಕಡಿಮೆಯಾಗುತ್ತಿದೆ. ಬಿಹಾರವನ್ನು ನಾವು ರಾಜಕೀಯವಾಗಿ ಜಾಗೃತಗೊಂಡ ಜನರು ಇರುವ ರಾಜ್ಯವೆಂದು ಹೇಳುತ್ತೇವಲ್ಲವೇ? ಆದರೆ ಅಲ್ಲಿ ಮೊದಲ ಹಂತದಲ್ಲಿ ಶೇ.50ಕ್ಕಿಂತ ಕಡಿಮೆ ಮತದಾನವಾಗಿದೆ. ಕೆಲವರು ನೋಟಾ ಆಯ್ಕೆ ಮಾಡಿಕೊಂಡಿದ್ದಾರೆ. ಕಳೆದ ಚುನಾವಣೆಯಲ್ಲಿ ನೋಟಾ ಒತ್ತಿದವರ ಸಂಖ್ಯೆ ಶೇ.1ಕ್ಕಿಂತ ಹೆಚ್ಚಿತ್ತು.

ಮತದಾನದ ಪ್ರಮಾಣ ಕಡಿಮೆಯಾಗಲು ಜನರಿಗೆ ಒಂದೆಡೆಯಿಂದ ಇನ್ನೊಂದೆಡೆಗೆ ಚುನಾವಣೆಯ ಸಮಯದಲ್ಲಿ ತೆರಳುವುದಕ್ಕೆ ಇರುವ ಸಮಸ್ಯೆಯೂ ಒಂದು ಕಾರಣ. ದೂರದ ಊರು ಹಾಗೂ ನಗರಗಳಲ್ಲಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಜನರು ಮತದಾನದ ದಿನ ತಮ್ಮ ಹಕ್ಕು ಚಲಾಯಿಸಲು ನಿಗದಿತ ಮತಗಟ್ಟೆಗೆ ಹೋಗಬೇಕಾಗುತ್ತದೆ. ಅದು ನೂರಾರು ಕಿ.ಮೀ. ದೂರವಿರಬಹುದು. ಅಂಥವರಿಗೆ ತಾವು ಇರುವಲ್ಲಿಂದಲೇ ಬ್ಯಾಲೆಟ್ ಪೇಪರಿನಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಿದರೆ ಮತದಾನದ ಪ್ರಮಾಣ ಹೆಚ್ಚಬಹುದು. ಇಂದಿನ ತಂತ್ರಜ್ಞಾನ ಪ್ರಗತಿಯ ಯುಗದಲ್ಲಿ ಇದು ಅಸಾಧ್ಯವೇನಲ್ಲ.

ನನಗೆ ಈ ಚುನಾವಣೆಯಲ್ಲಿ ಖುಷಿ ಕೊಟ್ಟ ಒಂದು ಸಂಗತಿಯೆಂದರೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಶೊಂಪೆನ್ ಬುಡಕಟ್ಟು ಸಮುದಾಯದ ಏಳು ಜನರು ಈ ಬಾರಿ ಮೊದಲ ಸಲ ಮತ ಚಲಾಯಿಸಿದ್ದಾರೆ. ಅವರಿಗೆ ಒಳ್ಳೆಯದಾಗಲಿ. ಅವರ ಅಮೂಲ್ಯ ಮತದಿಂದ ದೇಶದ ಪ್ರಜಾಪ್ರಭುತ್ವಕ್ಕೂ ಒಳ್ಳೆಯದಾಗಲಿ. ಚುನಾವಣೆಯಲ್ಲಿ ಮತ ಚಲಾವಣೆ ಮಾಡದ ಒಬ್ಬನೇ ಒಬ್ಬ ವ್ಯಕ್ತಿ ನಮ್ಮ ದೇಶದಲ್ಲಿ ಇಲ್ಲ ಎಂಬಂಥ ದಿನ ಬರಲಿ ಎಂದು ಆಶಿಸುತ್ತೇನೆ. ಆಗ ಮಾತ್ರ ನಾವು ಇನ್ನೂ ಹೆಚ್ಚು ಜೋರಾಗಿ, ಹೆಮ್ಮೆಯಿಂದ ಹೇಳಬಹುದು... ಜೈ ಹಿಂದ್!

(ಲೇಖಕರು ಹಿರಿಯ ಪತ್ರಕರ್ತರು)